ಓ ಎಸ್ **441/2025**

ಪಿ ಡಬ್ಲ್ಯೂ **-1**

**ದಿಃ 15.07.2026 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಜಿ ಯು ವಕೀಲರಿಂದ:**

ಈ ದಾವೆಯನ್ನು ಹೂಡುವ ಮೊದಲು ನನ್ನ ಅಣ್ಣಂದಿರು ಎಲ್ಲಿ ವಾಸ ಮಾಡುತ್ತಿದ್ದಾರೆ ಎಂಬ ಮಾಹಿತಿ ನನಗೆ ಗೊತ್ತಿತ್ತು. ಪ್ರತಿವಾದಿ 8 ರವರು 1983 ನೇ ಇಸವಿಯಿಂದ ಬೆಂಗಳೂರಿನಲ್ಲಿ ವಾಸವಾಗಿರುತ್ತಾರೆ . ಬೆಂಗಳೂರಿನಲ್ಲಿ ಅವರಿಗೆ ಸ್ವಂತ ಮನೆ ಇರುವುದಿಲ್ಲ , ನನ್ನ ತಂದೆಯ ಆಸ್ತಿಯನ್ನು ಬಿ ಡಿ ಎ ರವರು acquire ಮಾಡಿದ ನಂತರ ಪ್ರತಿವಾದಿ 9 ರವರಿಗೆ ನಿವೇಶನ ಖರೀದಿ ಮಾಡಲು ನನ್ನ ತಂದೆ ಹಣವನ್ನು ನೀಡಿರುತ್ತಾರೆ. ನನ್ನ ತಂದೆಗೆ ಸೇರಿದ ಯಾವ ಜಮೀನು ಬಿ ಡಿ ಎ ರವರು acquire ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ , ಅದು ವಳಗೇರಿಹಳ್ಳಿಯ ಜಮೀನಾಗಿರುತ್ತದೆ . ನಾನು ಈ ದಾವೆಯಲ್ಲಿ ಬಿ ಡಿ ಎ ರವರು ವಳಗೇರಿಹಳ್ಳಿಯ ಜಮೀನನ್ನು acquire ಮಾಡಿಕೊಂಡಿರುತ್ತಾರೆ ಎಂದು ಹೇಳಿರುವುದಿಲ್ಲ, ಆದರೆ ವಳಗೇರಿಹಳ್ಳಿಯಲ್ಲಿ ಜಮೀನಿರುತ್ತದೆ ಎಂದು ಹೇಳಿರುತ್ತೇನೆ.

ವಳಗೇರಿಹಳ್ಳಿಯಲ್ಲಿ ನಮ್ಮ ತಂದೆಗೆ ಸೇರಿದ 5 ಗುಂಟೆಯಿಂದ 20ಗುಂಟೆಯವರೆಗೂ ಜಮೀನಿತ್ತು, ಆ ಸಮಯದಲ್ಲಿ ನಾವು ಸಣ್ಣ ಮಕ್ಕಳಾದ ಕಾರಣ ನನಗೆ ನಿಖರವಾಗಿ ಅದರ ಬಗ್ಗೆ ಗೊತ್ತಿರುವುದಿಲ್ಲ. ಸದರಿ ಜಮೀನಿನ ಬಗ್ಗೆ ನನಗೆ ಮೊದಲಿಗೆ 7 ರಿಂದ 8 ವರ್ಷ ವಯಸ್ಸಿ ನಲ್ಲಿ ಗೊತ್ತಾಗಿರುತ್ತದೆ. ಬಿ ಡಿ ಎ ರವರು ಜಮೀನನ್ನು ವಶಪಡಿಸಿಕೊಂಡಾಗ ನನ್ನ ತಂದೆಯವರು ಬದುಕಿದ್ದರು. ನನ್ನ ತಂದೆಯವರು ಸದರಿ ಜಮೀನಿನ ಪರಿಹಾರ ಮತ್ತು ಹಣ ಪಡೆದುಕೊಂಡಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ . ನಾನು ಈ ದಾವೆಯನ್ನು ಹೂಡಿದಾಗ ಈ ಜಮೀನಿನ ಬಗ್ಗೆ ಮಾಹಿತಿ ಪಡೆಯಲು ಪ್ರಯತ್ನ ಮಾಡಿರುತ್ತೇನೆ, ಆದರೆ ಬಿ ಡಿ ಎ ರವರು acquire ಮಾಡಿಕೊಂಡಿರುವ ಕಾರಣ ಅದರ ಬಗ್ಗೆ ನನಗೆ ಹೆಚ್ಚಿ ನ ಮಾಹಿತಿ ಇರುವುದಿಲ್ಲ . ನನ್ನ ತಂದೆಯ ಹೆಸರಿನಲ್ಲಿ ವಳಗೇರಿಹಳ್ಳಿಯಲ್ಲಿ ಯಾವುದೇ ಜಮೀನು ಇಲ್ಲದೇ ಇರುವುದರಿಂದ ನನ್ನ ಹತ್ತಿರ ಯಾವುದೇ ದಾಖಲಾತಿಗಳು ಇರುವುದಿಲ್ಲಎಂದು ಕೇಳಿದರೆ ಸುಳ್ಳು . ನನ್ನ ತಂದೆಯ ಹೆಸರಿನಲ್ಲಿ ಯಾವುದಾದರೂ ಜಮೀನು ಆ ಹಳ್ಳಿಯಲ್ಲಿ ಇದ್ದಿದ್ದರೆ ನನಗೆ ಅದರ ಬಗ್ಗೆ ಮಾಹಿತಿ ಇರುತ್ತಿತ್ತು ಎಂದರೆ ಸಾಕ್ಷಿ ದಾಖಲಾತಿಗಳನ್ನು ನ್ಯಾ ಯಾಲಯಕ್ಕೆ ತರುತ್ತೇನೆ ಎಂದು ನುಡಿಯುತ್ತಾರೆ .

ನಾನು ಈ ದಾವೆಯನ್ನು ಹೂಡುವ ಮೊದಲು ವೆಂಕಟಮ್ಮ ನವರು 2023 ರಿಂದ ಹಾಸಿಗೆ ಹಿಡಿದಿರುತ್ತಾರೆ. ವೆಂಕಟಮ್ಮ ನವರ ಹತ್ತಿರ 40 ರಿಂದ 60 ಗ್ರಾಂ ಚಿನ್ನದ ಒಡವೆಗಳು ಇದ್ದವು, ಅದನ್ನು ನಾನು ತೆಗೆದುಕೊಂಡು ಇಟ್ಟುಕೊಂಡಿರುತ್ತೇನೆ ಎಂದರೆ ಸುಳ್ಳು . ಆ ವಿಚಾರವಾಗಿ ನನ್ನ ಅಣ್ಣಂದಿರು ನನ್ನನ್ನು ಕೇಳಿದಾಗ ನಾನು ಅವರ ಮೇಲೆ ಹಲ್ಲೆ ಮಾಡಿರುತ್ತೇನೆ ಎಂದರೆ ಸಾಕ್ಷಿ ಅವರೇ ನನ್ನ ಮೇಲೆ ಹಲ್ಲೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ .

ಸಿ ಸಿ ನಂಬರ್ 5246/2024 ರಂತೆ ಒಂದು ಪ್ರಕರಣ ವನ್ನು ಈ ಕುರಿತಾಗಿ ನನ್ನ ಮೇಲೆ ಮತ್ತು ನನ್ನ ಹೆಂಡತಿಯ ಮೇಲೆ ದಾಖಲಾಗಿರುತ್ತದೆ ಎಂದರೆ ಸಾಕ್ಷಿ ನಾನು ನೀಡಿದ ದೂರಿನ ಮೇಲೆ ಪೊಲೀಸರು ಬಿ ವರದಿಯನ್ನು ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ . ಯಾವ ದಿನ ನನ್ನ ಮೇಲೆ ದೂರು ನೀಡಿದ್ದರೋ ಆ ದಿನ ನಾನು ನನ್ನ ಅಣ್ಣಂದಿರ ಮೇಲೆ ಸುಳ್ಳು ದೂರನ್ನು ಪೊಲೀಸರಿಗೆ ನೀಡಿದ್ದೆ ಎಂದರೆ ಸಾಕ್ಷಿ ನಾನೇ ಮೊದಲು ಪೊಲೀಸರಿಗೆ ದೂರನ್ನು ನೀಡಿದ್ದೆ ಎಂದು ನುಡಿಯುತ್ತಾರೆ . ನಾನು ಕೊಟ್ಟಿರುವ ದೂರಿನಲ್ಲಿ ಯಾವುದೇ ಆಧಾರ ಇಲ್ಲದೇ ಇರುವ ಕಾರಣ ಪೊಲೀಸರು ಬಿ ವರದಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸುಳ್ಳು. ನನ್ನ ಅಣ್ಣಂದಿರು ಊರಿನಲ್ಲಿ ವಾಸವಿರಲಿಲ್ಲ ಎಂದರೆ ಸುಳ್ಳು. ಆ ಕಾರಣದಿಂದ ನಾನು ನನ್ನ ತಾಯಿಯ ಒಡವೆಗಳನ್ನು ಕಬಳಿಸಿ , ಇತರೇ ಪಿತ್ರಾರ್ಜಿತ ಸ್ವತ್ತುಗಳನ್ನು ಕಬಳಿಸುವ ಉದ್ದೇಶ ಇಟ್ಟುಕೊಂಡಿದ್ದೆ ಎಂದರೆ ಸುಳ್ಳು . ನನ್ನ ತಾಯಿಯ ಮೇಲೆ ನಾನು ಹಲ್ಲೆ ಮಾಡಿದ ಕಾರಣ ನನ್ನ ತಾಯಿ ಹಾಸಿಗೆ ಹಿಡಿದಿರುತ್ತಾರೆ ಎಂದರೆ ಸುಳ್ಳು . ನನ್ನ ತಾಯಿ ಹಾಸಿಗೆ ಹಿಡಿದ ಮೇಲೆ ನನ್ನ ಅಣ್ಣಂದಿರು ಪ್ರಶ್ನೆ ಮಾಡಿದಾಗ ನಾನು ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸುಳ್ಳು .

ದಾವಾ ಸ್ವತ್ತುಗಳಲ್ಲಿ ಆದಾಯ ಇರಲಿಲ್ಲ ಎಂದರೆ ಇತ್ತು . ನಾನು ಅಲ್ಲದೇ ದಾವಾ ಸ್ವತ್ತುಗಳಲ್ಲಿ ಬೇರೆ ಯಾರು ವ್ಯವಸಾಯ ಮಾಡುತ್ತಿರಲಿಲ್ಲ ಎಂದರೆ ಸರಿ . ರಾಮಕೃಷ್ಣಪ್ಪ ನವರು 1983 ರಿಂದ ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡಿಕೊಂಡು ಇದ್ದರು ಎಂದರೆ ಸರಿ . ನಂತರ ಅವರು ಹೋಮ್ ಗಾರ್ಡ್ ಇಲಾಖೆಗೆ ಹೋಗಿರುತ್ತಾರೆ ಎಂದರೆ ಗೊತ್ತಿಲ್ಲ . ಅವರ ಸಂಬಳದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ . ರಾಮಕೃಷ್ಣಪ್ಪ ರವರು ನನ್ನನ್ನು ಬಿಟ್ಟು ದಾವಾ ಸ್ವತ್ತಿನಲ್ಲಿ ವ್ಯವಸಾಯ ಮಾಡಿರುವುದಿಲ್ಲ ಎಂದರೆ ಸಾಕ್ಷಿ ನಾನು ವ್ಯವಸಾಯ ಮಾಡುವ ಮುಂಚೆ ಅವರೇ ವ್ಯವಸಾಯ ಮಾಡುತ್ತಿದ್ದರು ಎಂದು ನುಡಿಯುತ್ತಾರೆ . ರಾಮಕೃಷ್ಣಪ್ಪ ನವರು ವ್ಯವಸಾಯ ಮಾಡುವುದನ್ನು ನಿಲ್ಲಿಸಿದ ತಕ್ಷಣ ನಾನು ವ್ಯವಸಾಯ ಮಾಡುತ್ತಿದ್ದೆ ಎಂದರೆ ಸಾಕ್ಷಿ ನಾನು ಸಣ್ಣ ಹುಡುಗನಿಂದ ವ್ಯವಸಾಯ ಮಾಡುತ್ತಿದ್ದೆ ಎಂದು ಹೇಳುತ್ತಾರೆ .

ದಾವಾ ಸ್ವತ್ತಿನಲ್ಲಿ 12 ರಿಂದ 15 ಲಕ್ಷ ಆದಾಯ ಬರುತ್ತಿತ್ತು ಎಂದು ನಾನು ಹೇಳಿರುತ್ತೇನೆ ಎಂದರೆ ಸುಳ್ಳು . ಆ ಕಾರಣದಿಂದ ಯಾವುದೇ ಆದಾಯ ಇರಲಿಲ್ಲ ಎಂದರೆ ಆದಾಯ ಇತ್ತು . ನಾನೇ ವ್ಯವಸಾಯ ಮಾಡುತ್ತಿದ್ದ ಕಾರಣ

ದಾವಾ ಸ್ವತ್ತಿನಲ್ಲಿ ಬರುತ್ತಿದ್ದ ಎಲ್ಲ ಆದಾಯವನ್ನು ನಾನೇ ಬಳಸುತ್ತಿದ್ದೆ ಎಂದರೆ ನಾನು ನನ್ನ ಅಣ್ಣಂದಿರಿಗೆ ಕೊಡುತ್ತಿದ್ದೆ ಎಂದು ನುಡಿಯುತ್ತಾರೆ. ಎಷ್ಟು ಆದಾಯ ಬರುತ್ತಿತ್ತು ಎಂದು ನನ್ನ ಹತ್ತಿರ ದಾಖಲಾತಿಗಳು ಇರುವುದಿಲ್ಲ ಎಂದರೆ ಅವರೇ ಮಾರಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ .

2004 ನೇ ಇಸವಿಯಲ್ಲಿ ಪೊಲೀಸ್ ಇಲಾಖೆಯಲ್ಲಿ ನಿವೇಶನ ಹಂಚುವ ಕಾಲದಲ್ಲಿ ಪ್ರತಿವಾದಿ 8 ರವರಿಗೆ ನಿವೇಶನವನ್ನು ನೀಡಲಾಗಿರುತ್ತದೆ ಎಂದರೆ ಸುಳ್ಳು. ಆ ದಾಖಲಾತಿಯ ಬಗ್ಗೆ ನಾನು ಏನು ತಿಳಿದುಕೊಳ್ಳಲು ಪ್ರಯತ್ನ ಮಾಡಿಲ್ಲ ಎಂದರೆ ನನಗೆ ಗೊತ್ತೇ ಇಲ್ಲ ಎಂದು ನುಡಿಯುತ್ತಾರೆ . 8 ನೆ ಪ್ರತಿವಾದಿಗೆ ಐಟಂ ನಂಬರ್ 7 ನಿವೇಶನ ಮಂಜೂರಾದ ಸಮಯದಿಂದ ಅವರ ಸಂಬಳದಲ್ಲಿ ಅವರು ಕಂತುಗಳನ್ನು ಕಟ್ಟುತ್ತಿದ್ದರು ಎಂದರೆ ಸುಳ್ಳು . ಆ ಸಮಯದಲ್ಲಿ ಸದರಿ ಐಟಂ ನಂಬರ್ 7 ರೂ. 2,26,800/- ಇತ್ತು , ಅದನ್ನು ಅವರು ಸಂಬಳದಿಂದ ಕೊಟ್ಟಿರುತ್ತಾರೆ ಎಂದರೆ ಸುಳ್ಳು .

2020ನೇ ಇಸವಿಯಲ್ಲಿ ಮನೆ ಕಟ್ಟಲು ಹೋದಾಗ ಆ ಸ್ವತ್ತು ಅದಲು ಬದಲಾಗಿದೆ ಎಂದು ಕಂಡು ಬಂದಾಗ ಬಿ ಡಿ ಎ ರವರು ಅವರಿಗೆ ಬದಲಿ ಸ್ವತ್ತನ್ನು ನೀಡಿರುತ್ತಾರೆ ಎಂದರೆ ಸುಳ್ಳು . ಪ್ರತಿವಾದಿ 8 ರವರು ಆ ಸಮಯದಲ್ಲಿ ನಿವೃತ್ತಿ ಹೊಂದಿದ್ದು ಅವರ ಪಿಂಚಣಿಯಿಂದ ಅವರು ಹೆಚ್ಚಿ ನ ಹಣವನ್ನು ನೀಡಿ ಸದರಿ ಸ್ವತ್ತನ್ನು ನೋಂದಣಿ ಮಾಡಿಸಿಕೊಂಡಿರುತ್ತಾರೆ ಎಂದರೆ ಸುಳ್ಳು . ಐಟಂ ನಂಬರ್ 7 ನ್ನು ಕೊಂಡು ಕೊಳ್ಳುವ ಸಮಯದಲ್ಲಿ ನನ್ನದಾಗಲಿ ಅಥವಾ ಬೇರೆ ಇನ್ನಾ ರ ಹತ್ತಿರವಾಗಲಿ, ಒಟ್ಟು ಕುಟುಂಬದ ಆದಾಯದಿಂದಾಗಲಿ ಹಣ ಪಡೆಯದೇ ಅವರು ಖರೀದಿ ಮಾಡಿರುತ್ತಾರೆ ಎಂದರೆ ಸುಳ್ಳು . ಐಟಂ ನಂಬರ್ 7 ಕ್ಕೆ ಸಂಬಂದಿಸಿದಂತೆ ನಾನಗಾಗಲಿ ಮತ್ತು ನನ್ನ ಅಣ್ಣ ತಮ್ಮಂದಿರಿಗಾಗಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸುಳ್ಳು , ಹಕ್ಕು ಇರುತ್ತದೆ.

ಪ್ರತಿವಾದಿ 9 ರವರು ಶಾಲೆಯ ಶಿಕ್ಷಕರಾಗಿದ್ದರು ಎಂದರೆ ಅವರು ದಿನಗೂಲಿ ನೌಕರರಾಗಿ ಹೋಗುತ್ತಿದ್ದರು ಎಂದು ನುಡಿಯುತ್ತಾರೆ . ಅವರು ಶಿಕ್ಷಕರಾಗಿರುವ ವಿಚಾರ ನನಗೆ ಗೊತ್ತಿದ್ದರೂ ಅವರು ದಿನಗೂಲಿ ನೌಕರರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸುಳ್ಳು . ನನ್ನ ಅಣ್ಣ ನರಸಿಂಹಯ್ಯ ನವರು ಕೂಡ ಜೈಲ್ ವಾರ್ಡನ್ ಆಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ . ಅವರು 3 ಜನರು ಕೂಡ ಅವರ ಸಂಬಳದಲ್ಲಿ ಅವರ ಕುಟುಂಬವನ್ನು ನಿರ್ವಹಣೆ ಮಾಡುತ್ತಿದ್ದರು ಎಂದರೆ ಸುಳ್ಳು. ನಾನು ಈ ದಾವೆಯನ್ನು ಹೂಡುವ ಮೂಲಕ 8 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಐಟಂ ನಂಬರ್ 7 ನ್ನು ಸೇರಿಸಿರುತ್ತೇವೆ ಎಂದರೆ ಸುಳ್ಳು . ದಾವಾ ಸ್ವತ್ತಿನಲ್ಲಿ ನಾನು ಕೂಡ ಒಂದು ಕಟ್ಟಡವನ್ನು ಕಟ್ಟಿರುತ್ತೇನೆ ಎಂದರೆ ಸಾಕ್ಷಿ ನಾನು ಜೇನು ಸಾಕಾಣಿಕೆ ಮಾಡಿ ನಾನು ಕಟ್ಟಡವನ್ನು

ಕಟ್ಟಿರುತ್ತೇನೆ ಎಂದು ನುಡಿಯುತ್ತಾರೆ . ಜೇನು ಸಾಕಾಣಿಕೆ ಕೂಡ ದಾವಾ ಸ್ವತ್ತಿನಲ್ಲಿ ಮಾಡುತ್ತಿದ್ದೇನೆ ಎಂದರೆ ಸುಳ್ಳು. ನಾನು ಪ್ರಕೃತಿಯಲ್ಲಿ ಇರುವ ಜೇನನ್ನು ಹಿಡಿದು ಜೀವನ ಮಾಡುತ್ತೇನೆ . ನನ್ನ ಆದಾಯವನ್ನು ಒಟ್ಟು ಕುಟುಂಬದ ಆದಾಯ ಅಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿ ನಾನು ಸ್ವಂತವಾಗಿ ಸಾಕಾಣಿಕೆ ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. ನಾನು ಜೇನು ಸಾಕಾಣಿಕೆ ಮಾಡುವ ಬಾಕ್ಸನ್ನು ಕಾಡಿನಲ್ಲಿ ಇಡುತ್ತೇನೆ. ನಾನು ದಾವಾ ಸ್ವತ್ತಿನಲ್ಲಿ ಜೇನು ಸಾಕಾಣಿಕೆ ಮಾಡುವ ಬಾಕ್ಸಗಳನ್ನು ಇಟ್ಟು ನಾನು ಕಾಡಿನಲ್ಲಿ ಇಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

**ಮರುವಿಚಾರಣೆ: ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**